ಭಾಷೆ ಮಾತಾಡ್ಕೊತ ಬಂದಿಲ್ಲ. ಹಾಗಾಗೀನೆ ನಾನು ಗುಲ್ಬರ್ಗಾಕ್ಕ ಬಂದಿನಿ, ಇಲ್ಲಿ ಭಾಷೇನ ನನ್ನ ದೇಹದೊಳಗ ಹಾಕ್ಕೊಳಾಕ ಬಂದೀನಿ. ನಾನು 'ಜನಪದ'ನ ರಿವೈವ್ ಮಾಡ್ಲಾಕ ಬಂದೀನಿ ಅಂತೆಲ್ಲ ಹೇಳಾದು ಸರಿಯಲ್ಲ. ಯಾವ್ದನ್ನೂ ರಿವೈವ್ ಮಾಡ್ಲಾಕ ನಾನ್ಯಾರೂ ಅಲ್ಲ. ಇಲ್ಲಿ ನಾನೊಂದು ಮೀಡಿಯಂ ಅಷ್ಟೆ.

ಸಾಕ್ಷ್ಯಚಿತ್ರ ಮಾಡ್ಬೇಕಾದಾಗ ನಾ ಹಳ್ಳಿಯಿಂದ ಹಳ್ಳಿಗೆ ಹೋಗ್ತಾ, ರಿಸರ್ಚ್ ಮಾಡ್ತಾ ಇದ್ದಾಗ ಅಲ್ಲೆಲ್ಲ ಭೆಟ್ಟಿಯಾದ ಜನ, ಅಜ್ಜಿಯಂದ್ರೆಲ್ಲ ನನಗ ಹೊಸ ಪ್ರಪಂಚ ತೋರ್ಸಿದ್ರು. 'ನಾನು ಅದು, ಇದು' ಅನ್ನು ಲೇಬಲ್‌ಗಳೆಲ್ಲ ನಮ್ಗೆ ಯಾವುದಾದ್ರು ಗ್ರಾಂಟ್ ಮತ್ತೊಂದಕ್ಕೆ ಬರೀಬೇಕಾದಾಗ ಅಥವಾ ಯಾವುದಾದ್ರು ಅಲ್ಬಮ್ ರಿಲೀಸ್ ಮಾಡುವಾಗ ಬೇಕಾಗ್ತದ. ಅವೆರಡೂ ಮಾಡೋದಿಲ್ಲ ಅಂದ್ರ ನಮಗ ಯಾವ ಹಣೆಪಟ್ಟಿನೂ ಬ್ಯಾಡ. ಯಾವುದಾದ್ರು ಕಾರ್ಯಕ್ರಮಕ್ಕೆ ಕರೆದಾಗ ನಮ್ಮ ಬಯೋಡೇಟ ಕೊಡಿ ಅಂತ ಕೇಳ್ತಾರ. ಈ ಬಯೋಡೇಟ ಕೊಡಾದು ಭಾರಿ ಕಷ್ಟದ ಕೆಲಸ ನೋಡಿ... ಯಾಕಂದ್ರ ಪ್ರತಿದಿನ ನನ್ನನ್ನ ನಾನು ಹೊಸದಾಗಿ ಕಾಣ್ತಾ ಹೋಗ್ವಾಗ ಬಯೋಡೇಟ ಕೊಡಾದು ಹೆಂಗೆ ಹೇಳಿ...

◆ **ನೀವು ನುಡಿಸೋ ಚೌಡಿಕೆ, ಆಡುವ ಯಲ್ಲಮ್ಮನಾಟವನ್ನು ಅದರ ಜಾತಿಯಿಂದ ಬೇರ್ಪಡಿಸಿ ನೋಡೋಕೆ ಸಾಧ್ಯ ಇಲ್ಲ. ಇದನ್ನ ಹೇಗೆ ಅರ್ಥ ಮಾಡ್ಕೊಳ್ಳೋದು?**

ಇದು ತುಂಬ ಇಂಪಾರ್ಟೆಂಟ್ ಪ್ರಶ್ನೆ. ಸದ್ಯಕ್ಕೆ, ಒಬ್ಬ ಮಾದಿಗ ಹೆಣ್ಣುಮಗಳಾಗಿ ನಾನು ದೇವದಾಸಿರು ಮತ್ತು ಜೋಗತಿರು ಹೇಳೋ ಕತೆಗಳ್ನ ಹೇಳ್ತಾ ಹೋಗ್ತಿದ್ದೀನಿ. ಅವ್ರು ಹೇಳೋ ಕತೆಗಳ್ನ ತಗೊಂಡು, ಅವಕ್ಕೆ ಕೆಲವೊಂದಂಶ ಸೇರಿಸಿ ರಾಜಕೀಯ ಟೂಲ್ ಆಗಿ ಬಳಸ್ತಾ ಇದ್ದೀನಿ. ಇದನ್ನ ಹೇಳೋಕೆ ನಂಗೆ ಯಾವ ಸಮಸ್ಯೇನೂ ಇಲ್ಲ. ಲಿಂಗಸೂಕ್ಷ್ಮತೆ ಬಗ್ಗೆ ಏನಾದ್ರೂ ಹೇಳಬೇಕು ಅಂದ್ರ, ಆ ಕತೇನ ಬಳಸಿ ಹೇಳ್ತೀನಿ. ನಮ್ಮ ಸಮಾಜದಾಗ ಮದುವಿ ಅನ್ನಾದು ಭಾಳ ಹಗಲುಗನಸಿನ ಸಂಗ್ತಿ ಆಗ್ಯಾದ, ಅದರ ವಿಚಾರನ ಟೀಕಿಸಬೇಕು ಅಂದ್ರೆ ಈ ಕತಿ ಮೂಲ್ಕ ನಾನದ್ನ ಮಾಡ್ತೀನಿ. ಈ ಕತೆಗೊಳ ಹಿಗ್ಗೋ ಗುಣ ಹ್ಯಂಗದ ಅಂದ್ರ, ನಾನು ಏನು ಅನ್ನೋದ್ನ ಅದ್ರ ಮೂಲಕ ತೋರಿಸ್ಬೋದು.

ಯಲ್ಲಮ್ಮನಾಟದೊಳಗ ಮಂಜಮ್ಮ ಜೋಗತಿ ಒಂದು ದೃಶ್ಯ ಮಾಡ್ತಾರ. ಅದೇನಂದ್ರ, ಪರಶುರಾಮ ರೇಣುಕನ ತಲೀಕಡಿ ಮಲಗಿರೋ ಜಮದಗ್ನಿನ ಕರಕೊಂಡು ಹೋಗ್ತಾನ. ಆಕಿ ಹಾಡ್ಕೋತ ಸ್ಟೇಜ್‌ನ ಚಕ್ಕರ್ ಹಾಕ್ತಾನೆ ಇರ್ತಾರ. ಆಕಿ ಬೀಳ್ತಾಳ, ಅಳ್ತಾಳ, ಕೆಮ್ತಾಳ... ದೃಶ್ಯ ಪೂರ ಆಕಿ 'ನಾ ನಿನ್ನ ನಂಬೀನಿ' ಅಂತ ಹೇಳ್ತಾನೆ ಹೋಗ್ತಾಳ. ಅವ್ವ ಯಾಕ ಹಿಂಗ ಇದ್ನೇ ಹೇಳ್ತಾ ಹೋಗ್ತಾಳ ಅಂದ್ರ, ಮಂಜಮ್ಮ ಹೇಳ್ತಾರ, 'ಆಟ ನೋಡಾಕ ಕುಂತವ್ರೆಲ್ಲ ಅಳಾತನಕ ಈ ದೃಶ್ಯ ಮುಗಿಯಂಗಿಲ್ಲ' ಅಂತ! ಇದು ಒಗಟು, ಇದು ಕಮ್ಯುನಿಟಿಯ ಕತಾರ್ಸಿಸ್... ಅಂದ್ರೆ ಹಗುರ ಆಗೋ ರೀತಿ... ಅದ ನೋಡ್ತಾ

ಶಿಲ್ಪಾ ಮುಡಬಿ ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರು. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ 'ಮೀಡಿಯಾ ಆರ್ಟ್ಸ್ ಅಂಡ್ ಪ್ರೊಡಕ್ಷನ್' ವಿಷಯದಲ್ಲಿ ಪದವಿ ಪಡೆದಿರುವ ಅವರು, ಭಾರತಕ್ಕೆ ಮರಳಿದ ನಂತರದಲ್ಲಿ ಬಯಲನ್ನೇ ವಿಶ್ವವಿದ್ಯಾಲಯವಾಗಿ ಮಾಡಿಕೊಂಡವರು. ಕಲೆಯ ಬೆನ್ನತ್ತಿ ಸದ್ಯಕ್ಕೆ ಕಲಬುರ್ಗಿ ನಿವಾಸಿ. ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಸಾಕ್ಷ್ಯಚಿತ್ರ ನಿರ್ಮಾಣದ ಬಗ್ಗೆ ಬೋಧಕಿಯಾಗಿ, ರಂಗಶಂಕರದಲ್ಲಿ ಕಾರ್ಯಕ್ರಮ ಸಂಯೋಜಕಿಯಾಗಿ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯೆಯಾಗಿ ಕಾರ್ಯ ನಿರ್ವಹಣೆ. ಯುವಜನ, ಮಕ್ಕಳು ಹಾಗೂ ಮಹಿಳೆಯರ ಹಕ್ಕುಗಳ ಕುರಿತು ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಕೆಲಸ ಮಾಡಿದ್ದಾರೆ. 'ಅರ್ಬನ್ ಫೋಕ್ ಪ್ರಾಜೆಕ್ಟ್'ನ ಸಹ ಸಂಸ್ಥಾಪಕಿ. ಪ್ರಸ್ತುತ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ(IGNCA)ದ ಶೈಕ್ಷಣಿಕ ಸಲಹಾ ಸಮಿತಿಯ ಭಾಗವಾಗಿದ್ದಾರೆ.